<u>ದಿನಾಂಕಃ 16-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ **1** ರಿಂದ **3** ನೇ ಆರೋಪಿಯ ಪರ ಶ್ರೀ ಆರ್ ವಿ ಡಿ ವಕೀಲರಿಂದಃ</u>

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಾಯಿದೆಗಳ ಪ್ರಕಾರ SC/ST ಪ್ರಕರಣಗಳನ್ನು ಡಿವೈ ಎಸ್ ಪಿ ದರ್ಜೆಯ ಮತ್ತು ಅದಕ್ಕಿಂತ ಮೇಲ್ಪಟ್ಟ ನೌಕರರು ತನಿಖೆ ಮಾಡಬೇಕು ಅಂದರೆ ಸರಿ . ಸದರಿ ತನಿಖೆಯನ್ನು ಮಾಡಲು ಜಿಲ್ಲಾ ವರಿಷ್ಠಾಧಿಕಾರಿಗಳ ಆದೇಶ ಬೇಕು ಅಂದರೆ ಸರಿ. ಈ ಪ್ರಕರಣದಲ್ಲಿ ನನಗೆ ಪೊಲೀಸ್ ವರಿಷ್ಟಾಧಿಕಾರಿಗಳು ನನಗೆ ತನಿಖೆ ಮಾಡಲು ಆದೇಶವನ್ನು ಕೊಟ್ಟಿರುವುದಿಲ್ಲ. ನಾನು ಮಧುಗಿರಿ ವೃತ್ತ ಉಪವಿಭಾಗದಲ್ಲಿ ಪ್ರಭಾರೆಯಾಗಿದ್ದ ಸಮಯದಲ್ಲಿ SP ರವರು ನನಗೆ ಮೌಖಿಕವಾಗಿ ಆದೇಶವನ್ನು ನೀಡಿದರು. ಅದನ್ನು ನಾನು ಡೈರಿಯಲ್ಲಿ ನಮೂದಿಸಿಲ್ಲ. ಈ ಪ್ರಕರಣವನ್ನು ನಾನು ತನಿಖೆ ಮಾಡಲು ಸಕ್ಷಮ ಅಧಿಕಾರಿ ಅಲ್ಲ ಅಂದರೆ ಸರಿಯಲ್ಲ. ಮೃತ ಮಹಾಂತೇಷ್ ರವರು ರೌಡಿಶೀಟರ್ ಅಂದರೆ ಸರಿ . ಇತನು ಈ ಮೊದಲು ಮಧುಗಿರಿ ಪೊಲೀಸ್ ಠಾಣೆಯ ಎಎಸ್ ಐ ರವ ರಕೊಲೆ ಕೇಸ್ ನಲ್ಲಿ ಭಾಗಿಯಾಗಿದ್ದ ಅಂದರೆ ನನಗೆ ಗೊತ್ತಿಲ್ಲ. ಸದರಿ ವ್ಯಕ್ತಿಯು ಇದೇ ನ್ಯಾಯಾಲಯೇದಲ್ಲಿ spl.c. 446/2015 ರಲ್ಲಿಯೂ ಸಹ ಆರೋಪಿಯಾಗಿದ್ದ ಅಂದರೆ ಮಾಹಿತಿಯಿಲ್ಲ. ಮಧುಗಿರಿ,ತುಮಕೂರು ,ಕೊರಟಗೆರೆ ಸದರಿ ವ್ಯಕ್ತಿಯವಿರುದ್ಧ ಸುಮಾರು 25 ಪ್ರಕರಣಗಳು ಇದ್ದ ಕಾರಣಕ್ಕಾಗಿ ಆತನ ವಿರುದ್ಧ ರೌಡಿ ಶೀಟರ್ ಸೇರಿಸಿದ್ದಾರೆ ಅಂದರೆ ಇರಬಹುದು. ಚಾಸಾ-1 ರವರಿಗೆ ಸಂಬಂಧಿಸಿದೆ ಇದೆ ಎನ್ನಲಾದ ಬಾವಿಗೆ

ತಡೆಗೋಡೆಯನ್ನು ನಿಲ್ಲಿಸಿರಲಿಲ್ಲ. ಚಾಸಾ-1 ರವರಿಗೆ ಪಂಚನಾಮೆಯ ಕಾಲದಲ್ಲಿ ಭಾಗವಹಿಸಲು ನಾನು ನೊಟೀಸ್ ಕೊಟ್ಟಿರುವುದಿಲ್ಲ. ದಿ 17-12-17 ರಂದು ಈ ಕೇಸಿನ ಕಡತವನ್ನು ಚಾಸಾ-27 ರವರಿಂದ ಯಾವ ಸಮಯದಲ್ಲಿ ಮುಂದಿನ ತನಿಖೆಗಾಗಿ ನಾನು ಪಡೆದುಕೊಂಡಿರುತ್ತೇನೆಂದು ಸಮಯ ಹೇಳಲು ಆಗುವುದಿಲ್ಲ. ಸದರಿ ಕೇಸ್ ಪ್ರ ವ ವ ವನ್ನು ನ್ಯಾಯಾಧೀಶ ರ ಮುಂದೆ ಸಲ್ಲಿಸಿರುವ ಬಗ್ಗೆ ಮತ್ತು ಸ್ವೀಕರ ಆಗಿರುವ ಬಗ್ಗೆ ಯಾವುದೇ ದಾಖಲೆಯನ್ನು ನನಗೆ ಕೊಟ್ಟಿರುವುದಿಲ್ಲ. ಪಂಚರನ್ನು ಮಧುಗಿರಿ ಟೌನ್ ನ ಬೋವಿ ಕಾಲೋನಿಯಿಂದ ನಮ್ಮ ಠಾಣಾ ಹೆಚ್ ಸಿ 235 ರವರ ಮುಖಾಂತರ ನೋಟೀಸ್ ಜಾರಿ ಮಾಡಿ ಘಟನಾ ಸ್ಥಳಕ್ಕೆ ಕರೆಸಿಕೊಂಡಿರುತ್ತೇನೆ .ಯಾವುದೇ ಘೋರ ಪ್ರಕರಣಗಳಲ್ಲಿ ನೋಟೀಸ್ ನ್ನು ನಾನೇ ಖುದ್ದಾಗಿ ಜಾರಿ ಮಾಡಬೇಕು ಅಂದರೆ ಸರಿ. ಘಟನೆ ನಡೆಯಿತು ಎನ್ನಲಾದ ಸ್ಥಳಕ್ಕೆ ನಾನು ಬೆಳಗ್ಗೆ 10.30 ಗಂಟೆಗೆ ಹೋಗಿದ್ದು , ಪಂಚರು 11.30 ಗಂಟೆಗೆ ಬಂದರು. ಸದರಿ ಸ್ಥಳದಲ್ಲಿ ಪಂಚರು ಮತ್ತು ನಮ್ಮನ್ನು ಹೊರತುಪಡಿಸಿ ಬೇರೆ ಸಾರ್ವಜನಿಕರು ಸೇರಿದ್ದರು. ನಿಪಿ-2 ಸ್ಥಳೀಯ ಸಾರ್ವಜನಿಕರ ಸಹಿ ತೆಗೆದುಕೊಂಡಿಲ್ಲ . ನಾನು ಮತ್ತು ಚಾಸಾ-27 ರವರು ಸೇರಿ ನಿಪಿ-1 ನ್ನು ಸೃಷ್ಟಿಸಿಕೊಂಡಿರುತ್ತೇವೆ ಅಂದರೆ ಸರಿಯಲ್ಲ. ನಿಪಿ-2 ನ್ನು ತಯಾರು ಮಾಡುವ ಕಾಲಕ್ಕೆ ಚಾಸಾ-11 ಮತ್ತು 12 ಪಂಚನಾಮೆಯ ಸ್ಥಳದಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ. ನಿಪಿ-2 ನ್ನು ಬರೆದವರು ಹೆಚ್ ಸಿ 235 ಎಂದು ನಿಪಿ-2 ರಲ್ಲಿ ಉಲ್ಲೇಖಿಸಿರುವುದಿಲ್ಲ. ನಿಪಿ-2 ರಲ್ಲಿ ವೈಟನರ್ ಮಾರ್ಕ್ ಹಾಕಿ ಅಳಿಸಿ ತಿದ್ದಿ ಬರೆದಿರುತ್ತೇವೆ ಅಂದರೆ ಸರಿ . ನಮ್ಮ ಅನುಕೂಲಕ್ಕೆ ತಕ್ಕಂತೆ ಮಹಜರ್ ಗೆ ವೈಟನರ್ ಹಾಕಿ ಬರೆದಿರುತ್ತೇವೆ ಅಂದರೆ ಸರಿಯಲ್ಲ. ಎಂಓ-2,3,5,6,7 ನ್ನು

ಸಾಕ್ಷಿದಾರರ ಸಮಕ್ಷಮ ಅಮಾನತ್ತುಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ . ಸುಮಾರು ಎರಡು ಚಪ್ಪಲಿಗಳು ಒಂದಕ್ಕೆ ಒಂದು ಎಷ್ಟು ಅಡಿ ಅಂತರದಲ್ಲಿ ಬಿದ್ದಿದ್ದವು ಎಂದು ನಮೂದಿಸಿಲ್ಲ. ನಮ್ಮ ಸಿಬ್ಬಂದಿ ಮತ್ತು ಸಾರ್ವಜನಿಕರ ಸಹಾಯದಿಂದ ನೀರಿನಲ್ಲಿ ಬಿದ್ದಿದ್ದ ಮೃತ ದೇಹವನ್ನು ಹೊರಗೆ ತೆಗೆಯಲಾಯಿತು. ನಿಪಿ-2 ರಲ್ಲಿ ಪೊಲೀಸರ ಸಹಾಯದಿಂದ ಮೃತದೇಹವನ್ನು ತೆಗೆದಿದೆ ಎಂದು ಬರೆದಿಲ್ಲ ಅಂದರೆ ಸರಿ. ಅಂತರ್ ಗಂಗೆಯ ಸಾಧನವನ್ನು ಸಾರ್ವಜನಿಕರಿಂದ ತೆಗೆದುಕೊಂಡಿ ಬಂದಿರುತ್ತೇವೆ. ಜಬೀ ವುಲ್ಲಾರವರು ಸದರಿ ಸಾಧನವನ್ನು ಬಿಟ್ಟಿರುತ್ತಾರೆ. ಮೃತ ದೇಹವು ನಾವು ಹೊರ ತೆಗೆಯುವ ಕಾಲಕ್ಕೆ ಕೊಳೆತ ಸ್ಥಿತಿಯಲ್ಲಿ ಇರಲಿಲ್ಲ . ನಾವು ಅಮಾನತ್ತು ಪಡಿಸಿದ ಬನಿಯನ್ ಮೃತ ದೇಹದ ಮೇಲೆ ಇತ್ತು. ನೀರಿನಲ್ಲಿ ಬನಿಯನ್ ನ ಇದ್ದ ಕಾರಣ ರಕ್ತದ ಕಲೆಗಳು ಇರಲಿಲ್ಲ ಅಂದರೆ ಸರಿಯಲ್ಲ. ನನಗೆ ಪಿರ್ಯಾದಿ ಹೇಳಿದ ಮೇರೆಗೆ ಸದರಿ ಸರ್ವೇ ನಂಬರ್ ನ್ನು ನಮೂದಿಸಿರುತ್ತೇನೆ . ಮು ಮಾ-4 ತಲೆಯ ಚಿಪ್ಪಿನ ಮೂಳೆಯ ಒಂದು ಭಾಗ ಎಂದು ನಮೂದಿಸಿರುತ್ತೇವೆ. ನಿಪಿ-2 ನ್ನು ಮಾಡುವ ಕಾಲಕ್ಕೆ ಮು ಮಾ- 2 ,3,5,6,7,19 ನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಅಂದರೆ ಸರಿಯಲ್ಲ . ಗಾಯಗಳ ವಿಸ್ತೀರ್ಣವನ್ನು ಟೇಪ್ ನ ಸಹಾಯದಿಂದ ಅಳತೆ ಮಾಡಿ ಬರೆದಿರುತ್ತೇವೆ . ಮು ಮಾ-11 ಮತ್ತು 12 ನ್ನು ವಶಪಡಿಸಿಕೊಳ್ಳುವ ಕಾಲಕ್ಕೆ ಪಿರ್ಯಾದಿದಾರರು ಮತ್ತು ಚಾಸಾ-11 ಮತ್ತು 12 ಸ್ಥಳದಲ್ಲಿ ಹಾಜರಿರಲಿಲ್ಲ ಅಂದರೆ ಸರಿಯಲ್ಲ. ಬಾವಿಯು ಎಷ್ಟು ಅಗಲ ಮತ್ತು ಉದ್ದವಿತ್ತು ಎಂದು ನಮೂದಿಸಿಲ್ಲ ಅಂದರೆ ಸರಿ. ಸದರಿ ಬಾವಿಯಲ್ಲಿ ಸುಮಾರು 20 ಅಡಿ ನೀರು ಇತ್ತು. ಸದರಿ ಬಾವಿಯ ನೀರನ್ನು

ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದ ಅಥವಾ ಇಲ್ಲವೆಂದು ನಮೂದಿಸಿರುವುದಿಲ್ಲ. ನನ್ನ ತನಿಖೆಯ ಕಾಲದಲ್ಲಿ ಚಾಸಾ-3 ಮತ್ತು 4 ಯಾವುದೇ ಹೇಳಿಕೆ ನೀಡಿಲ್ಲ ಅಂದರೆ ಸರಿಯಲ್ಲ. ದಿ 17-12-2017 ರಲ್ಲಿ ನನ್ನ ಸಮಕ್ಷಮ ಹೇಳಿಕೆ ನೀಡಿರುತ್ತಾರೆ. ಆ ಕುರಿತು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಿ 18-12-17 ರಂದು ಚಾಸಾ-5 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಅಂದರೆ ಸರಿಯಲ್ಲ. ಆರೋಪಿಗಳ ಪತ್ತೆಗಾಗಿ ಚಾಸಾ-27 ರವರನ್ನು ನಾನೇ ಲಿಖಿತವಾಗಿ ಆದೇಶ ಮಾಡಿದ್ದೇನು. ದಿ 17-12-17 ರಂದು ಸಿಬ್ಬಂದಿಗಳನ್ನು ಆರೋಪಿತಗಳ ಪತ್ತೆಗಾಗಿ ನೇಮಕ ಮಾಡಿದ್ದೇನು. ಚಾಸಾ-27 ರವರು ಸ್ಥಳದಲ್ಲಿ ಪರಿಶೀಲನೆ ಮಾಡಿ ವಿವರಗಳನ್ನು ಅದೇದಿನ ಮಾಡಿರುವುದಿಲ್ಲ. ಆರೋಪಿಗಳ ಪತ್ತೆಗಾಗಿ 4 ಜನ ನಮ್ಮ ಸಿಬ್ಬಂದಿಗಳನ್ನು ಮತ್ತು ಒಬ್ಬ ಪಿಎಸ್ ಐ ನ್ನು ನೇಮಕ ಮಾಡಿದ್ದೇನು. ಅವರನ್ನು ಹೊರತುಪಡಿಸಿ ಬೇರೆ ಯಾರನ್ನು ನೇಮಕ ಮಾಡಿಲ್ಲ. ದಿ 19-12-17 ರಂದು 11.15 ಗಂಟೆ ಸಮಯದಲ್ಲಿ ನನ್ನ ಸಮಕ್ಷಮ ಆರೋಪಿಗಳನ್ನು ಹಾಜರುಪಡಿಸಿರುತ್ತಾರೆ . 1 ರಿಂದ 6 ನೇ ಆರೋಪಿಗಳನ್ನು ಯಾವ ಯಾವ ಸಮಯದಲ್ಲಿ ಯಾವ ಯಾವ ಸ್ಥಳಗಳಲ್ಲಿ ವಶಪಡಿಸಿಕೊಂಡೆವೆಂದು ನನಗೆ ವರದಿಯನ್ನು ಸಲ್ಲಿಸಿಲ್ಲ. ವೆಂಕಟೇಶ್ ನ ಬಳಿ ಇದ್ದ ಬೈಕ್ ನ್ನು ಮತ್ತು ಎಲ್ಲಾ ಆರೋಪಿಗಳನ್ನು ಏಕಾಕಾಲದಲ್ಲಿ ನಮ್ಮ ಸಿಬ್ಬಂದಿಗಳು ಹಾಜರುಪಡಿಸಿದರು. ಆರೋಪಿಗಳನ್ನು ನಮ್ಮ ಇಲಾಖಾ ಜೀಪಿನಲ್ಲಿ ಕರೆದುಕೊಂಡು ಬಂದ ಬಗ್ಗೆ ನಿಪಿ-19 ರಲ್ಲಿ ಇರುವುದಿಲ್ಲ. ನಿಪಿ-19 ರಲ್ಲಿ ಎಲ್ಲರೂ ಹೋಗಿದ್ದೇವು ಎಂದು ವರದಿ ಕೊಟ್ಟಿಲ್ಲ ಅಂದರೆ ಸರಿ . ನಾನು ಆರೋಪಿಗಳ ಅಂಗಶೋಧನೆ ಮಾಡಿರುತ್ತೇನೆ. 6 ಜನ ಆರೋಪಿಗಳ ಕಡೆಯಿಂದ ಯಾವುದೇ

ವಸ್ತುಗಳು ಸಿಕ್ಕಿರುವುದಿಲ್ಲ. ಆರೋಪಿಗಳನ್ನು ದಸ್ತಗಿರಿ ಮಾಡಿದ ಬಗ್ಗೆ ಅವರ ತಂದೆ, ತಾಯಿಗೆ ತಿಳಿಸಿದ್ದು ಅದನ್ನು ಕೇಸ್ ಡೈರಿಯಲ್ಲಿ ನಮೂದು ಇರುವುದಿಲ್ಲ. ಆರೋಪಿಗಳನ್ನು 11.00 ಗಂಟೆಗೆ ವಶಕ್ಕೆ ಪಡೆದು ನನ್ನ ಸಮಕ್ಷಮ 11.15 ಗೆ ನನ್ನ ಮುಂದೆ ಹಾಜರುಪಡಿಸಿದರು. ವರದಿಯಲ್ಲಿ ಸದರಿ ವೇಳೆಯ ಬಗ್ಗೆ ನಮೂದು ಇರುವುದಿಲ್ಲ. ದಸ್ತಗಿರಿ ಕ್ರಮವನ್ನು ಪ್ರತಿಯೊಬ್ಬ ಆರೋಪಿಗೆ ಎಷ್ಟು ಹೊತ್ತಿನಿಂದ ಎಷ್ಟು ಹೊತ್ತಿನವರಿಗೆ ಆಯಿತು ಎಂದು ಹೇಳಲು ಬರುವುದಿಲ್ಲ.

( ಈ ಹಂತದಲ್ಲಿ ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು)

-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು